A.— Sri S. R. KANTHI (Minister for Education).—

(*a*) 92.
(*b*) No.
(*c*) No.

ಶ್ರೀ ಬಿ. ಚನ್ನಬೈರೇಗೌಡ.—ಈಗ ತಾವು ಇಲ್ಲಿ ತಿಳಿಸಿರತಕ್ಕ 92 ಪೌರಸಭಾ ಪ್ರೌಢಶಾಲೆಗಳನ್ನು ನಡೆಸಲು ಆ ಪೌರಸಭೆಗಳಿಗೀಗ ಚೈತನ್ಯವಿಲ್ಲವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

†ಶ್ರೀ ಎಸ್. ಆರ್. ಕಂಠಿ.—ಆ ವಿಚಾರ ಸರ್ಕಾರಕ್ಕೆ ತಿಳಿದು ಬಂದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಅವುಗಳ ಹಣಕಾಸಿನ ಪರಿಸ್ಥಿತಿ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ನಮಗೆ ಆ ಹೈಸ್ಕೂಲುಗಳು ಯಾವ ರೀತಿಯಲ್ಲಿ ನಡೆಯುತ್ತಿವೆ ಯೆಂಬ ವಿಚಾರ ಮಾತ್ರ ತಿಳಿದುಬಂದಿದೆ. ಅವು ಚೆನ್ನಾಗಿ ಕೆಲಸ ಮಾಡುತ್ತಿವೆ, ಅವುಗಳ ಆಡಳಿತದಲ್ಲಿ ತಪ್ಪುಗಳೇನೂ ಕಂಡುಬಂದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಹಾಗಾದರೆ ಸರ್ಕಾರದವರು ಆ ಗುಲ್ಬರ್ಗ ಜಿಲ್ಲೆಯಲ್ಲಿ ಕೆಲವು ಮುನಿಸಿಪಲ್ ಹೈಸ್ಕೂಲುಗಳನ್ನು ಹೇಗೆ ಸರ್ಕಾರಿ ಹೈಸ್ಕೂಲುಗಳನ್ನಾಗಿ ಪರಿವರ್ತನೆ ಮಾಡಿದರು ?

ಶ್ರೀ ಎಸ್. ಆರ್. ಕಂಠಿ.—ಅವು ಮುನಿಸಿಪಲ್ ಹೈಸ್ಕೂಲುಗಳಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ವಿದ್ಯಾ ಮಂತ್ರಿಗಳು ಗುಂಡ್ಲುಪೇಟೆಗೆ ಬಂದಿದ್ದಾಗ History making place ಎಂತ ಹೇಳಿದರು. ಆ ಮಾತು ಹಾಗಿರಲಿ. ಅಲ್ಲಿಯ ಮುನಿಸಿಪಾಲಿಟಿಯವರು ಅವರಿಗೆ ಆ ಹೈಸ್ಕೂಲನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಅದನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಅವರು ಕೇಳಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ನಾನು ಆ ರೀತಿ ಹೇಳಲಿಲ್ಲ. ಅದು ಬಹಳ ದೊಡ್ಡ ಮಾತು. ಅಲ್ಲಿಯ ಜನರು ಅವರ ಹೈಸ್ಕೂಲನ್ನು ನಡೆಸುವುದಕ್ಕೆ ಹೆಚ್ಚಿನ ಗ್ರಾಂಟನ್ನು ಕೊಡಬೇಕೆಂದು ಕೇಳಿಕೊಂಡರು. ಮೇಲಾಗಿ ಬಿಲ್ಡಿಂಗ್ ವಿಚಾರವನ್ನೂ ತಿಳಿಸಿದರು.

ಶ್ರೀ ಬಿ. ಚನ್ನಬೈರೇಗೌಡ.—ಗುಲ್ಬರ್ಗಾದಲ್ಲಿ ಸರ್ಕಾರದವರೀಗ 5 ಖಾನಗೀ ಶಾಲೆಗಳನ್ನು ಸರ್ಕಾರಿ ಹೈಸ್ಕೂಲುಗಳನ್ನಾಗಿ ಪರಿವರ್ತನೆ ಮಾಡಿದ್ದಾರೆ. ಅದೇ ರೀತಿ ಇಲ್ಲಿರತಕ್ಕ ಖಾನಗೀ ಹೈಸ್ಕೂಲನವರು ಕೇಳಿದರೆ ಸರ್ಕಾರದವರು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಹಾಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆ ಎಲ್ಲ ಶಾಲೆಗಳ ಭಾರವನ್ನೂ ಸರ್ಕಾರ ಹೊರಬೇಕೆಂದರೆ ಬಹಳ ಕಷ್ಟವಿದೆ. ಈ ಹಿಂದೆ ಇದ್ದ ಸರ್ಕಾರ ಆ ರೀತಿ ಆಜ್ಞೆ ಮಾಡಿತ್ತು. ಹೈದ್ರಾಬಾದ್ ಕರ್ಣಾಟಕ ಬಹಳ ಹಿಂದುಳಿದ ಪ್ರದೇಶವೆಂದು ಹಾಗೆ ಆರ್ಡರ್ ಆಗಿತ್ತು.

ಶ್ರೀ ಐ. ನಾರಾಯಣಗೌಡ.—ಆ ಹೈದ್ರಾಬಾದ್ ಕರ್ಣಾಟಕ ಪ್ರದೇಶ ಎಷ್ಟು ಹಿಂದುಳಿದಿದೆಯೋ ಅಷ್ಟೇ ಹಳೇ ಮೈಸೂರು ರಾಜ್ಯದಲ್ಲೂ ಹಿಂದುಳಿದಿರತಕ್ಕ ಪ್ರದೇಶದವರು ಬಂದು ಕೇಳಿದರೆ ಅವರಿಗಾದರೂ ಸಹಾಯ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಆ ಹೈದ್ರಾಬಾದ್ ಕರ್ಣಾಟಕ ಪ್ರದೇಶಕ್ಕೆ ಹೋಗಿ ನೋಡಿಕೊಂಡು ಬಂದರೆ ಅವರು ಇಂಥ ಪ್ರಶ್ನೆಯನ್ನೇ ಹಾಕುವದಿಲ್ಲ.

ಶ್ರೀ ಸಿ. ಜೆ ಮುಕ್ಕಣ್ಣಪ್ಪ.—ಬೇರೆ ಬೇರೆ ಮಂತ್ರಿಗಳು ಪ್ರವಾಸ ಹೋದಕಡೆಗಳಲ್ಲೆಲ್ಲ ಆ ಮುನಿಸಿಪಲ್ ಹೈಸ್ಕೂಲುಗಳವರ ಅಹವಾಲನ್ನು ಕೇಳಿ, ಅವು ಅವರಿಗೆ ಮಾರಲಾರದ ಹೊರೆಯಾಗಿರುತ್ತವೆಂಬುದನ್ನು ಅವರು ತಿಳಿದುಕೊಂಡು ಬಂದಿರುತ್ತಾರೆಂಬ ಅಂಶ ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಆ ರೀತಿ ಅನೇಕ ಜನ ಮಂತ್ರಿಗಳು ಹೇಳಿರತಕ್ಕದ್ದನ್ನೇ ನನಗೆ ಅವರು ತಿಳಿಸಿಲ್ಲ.

Starting of Industrial Estates in Mandya District.

*Q.—222. Sri A. G. BANDI GOWDA (Srirangapatna).—

Will the Government be pleased to state :—

(*a*) whether they intend to start two Industrial Estates in Mandya District ;

(*b*) whether they intend to open one Industrial Estate in Srirangapatna Municipal area ;

(*c*) if not, the names of the Taluks in Mandya District in which they intend to open the Estates ?

A.—**Sri K. MALLAPPA** (Minister for Industries and Commerce).—

(*a*) Yes.
(*b*) No.
(*c*) (i) Nagamangala and
(ii) Mandya.

ಶ್ರೀ ಎ. ಜಿ. ಬಂಡೀಗೌಡ.—ಈ ಸರ್ಕಾರದವರು ಮಂಡ್ಯ—ನಾಗಮಂಗಲ ಎರಡು ಸ್ಥಳಗಳ ಹೆಸರನ್ನು ಸೂಚಿಸಿದ್ದಾರೆ. ಶ್ರೀರಂಗಪಟ್ಟಣದವರು ಮುಂದೆ ಬಂದರೆ ಅಲ್ಲಿ ಒಂದನ್ನು ಸ್ಥಾಪಿಸಲು ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಅವರು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿ ಮುಂದೆ ಬರಲಿ. The Government's policy is there to encourage them and to help them.

ಶ್ರೀ ಎ. ಜಿ. ಬಂಡೀಗೌಡ.—ಸಹಕಾರ ಸಂಘಗಳಲ್ಲದೆ, ಇಂಡಿವಿಜ್ಯುಯಲ್ಸ್ ಮುಂದೆ ಬಂದರೆ ಈ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ —ಅವರಿಗೂ ಪ್ರೋತ್ಸಾಹ ಕೊಡಬಹುದು.

Collection of surcharge from the land holders in Hubli Taluk, District Dharwar

Q.*—251. **Sri M. R. PATIL (Hubli).—

Will the Government be pleased to state :—

(*a*) whether it is a fact that they have recovered surcharge for the year 1961–62 from the land holders in Hubli taluk in Dharwar District under the Mysore Land Revenue (Surcharge) Act, 1961.

(*b*) if so, what is the amount so recovered in respect of the said taluk during the said year ;

(*c*) whether surcharge has been collected from the land holders of the other taluks of Dharwar District for the year 1961-62 ;

(*d*) if so, what is the amount collected from each of the Taluks of Dharwar District.

(*e*) whether it is a fact that surcharge under the said Act has not been collected at all for the year 1961-62 from any of the landholders in some of the Districts of the State.

(*f*) if so, which are the Districts where it was not collected at all and what were the reasons for not so doing ;

(*g*) what is the total amount of surcharge collected for the year 1961-62 from each of the District in the State ?

A.—**Sri M. V. KRISHNAPPA** (Minister for Revenue).—

(*a*) Yes.
(*b*) Rs. 25,386.93 nP.